# ಸಿದ್ಧತೆ

*ಶಿಕ್ಷಕನ ಮಾರ್ಗದರ್ಶಿ*ಯಲ್ಲಿಯ ಪಾಠಗಳ ಉತ್ತಮ ಪ್ರಸ್ತಾಪಿಸುವಿಕೆಯು ಉತ್ತಮವಾದ ಸಿದ್ಧತೆಯಿಂದ ಸಾಧ್ಯವಾಗಿ ಮಾಡಲ್ಪಡುತ್ತದೆ. ಒಬ್ಬ ವ್ಯಕ್ತಿಯು ಪಾಠವನ್ನು ಪ್ರಸ್ತಾಪಿಸುವದಕ್ಕೆ ತನ್ನನ್ನು ಯೋಗ್ಯವಾಗಿ ಸಿದ್ಧಪಡಿಸಿಕೊಂಡಿದ್ದರೆ ಒಳ್ಳೇ ಪಾಠವನ್ನು ಬೋಧಿಸಲು ಶಕ್ತನಾಗುವನು.

*ಈ ಶಿಕ್ಷಕನ ಮಾರ್ಗದರ್ಶಿಯಲ್ಲಿಯ* ಪಾಠಗಳನ್ನು ಹೇಳಲು ಶಿಕ್ಷಕನಿಗೆ ಸಹಾಯ ಮಾಡಲು ಈ ಕೆಳಗಿನ ಸೂಚನೆಗಳು ಕೊಡಲ್ಪಟ್ಟಿವೆ:

1. ನೀವು ಯೋಗ್ಯವಾಗಿ ಸಿದ್ಧರಾಗಲಿಕ್ಕಾಗುವಂತೆ ಪ್ರಾರ್ಥಿಸುತ್ತ, ಪ್ರಾರ್ಥನೆಯಲ್ಲಿ ಸಮಯ ಕಳೆಯಿರಿ, ಯೋಗ್ಯವಾದ ಮನೋಭಾವನೆ ಇರುವದಕ್ಕಾಗಿ, ಪಾಠವನ್ನು ಬೋಧಿಸಲು ನಿಮ್ಮನ್ನು ಸಿದ್ಧರನ್ನಾಗಿ ಮಾಡುವ ಸಂಗತಿಗಳನ್ನು ಮಾಡುವದಕ್ಕಾಗಿ, ತೆರೆದ ಮನಸ್ಸಿನಿಂದ ಅಧ್ಯಯನವನ್ನು ಮಾಡುವದಕ್ಕಾಗಿ, ವಿಷಯದ ಮೇಲೆ ಬೈಬಲ್ ಏನನ್ನು ಬೋಧಿಸುತ್ತದೆ ಎಂಬುದನ್ನು ಸ್ಪಷ್ಟವಾಗಿ ನೋಡಲು ಶಕ್ತರಾಗುವದಕ್ಕಾಗಿ, ವಿಷಯದ ಮೇಲೆ ಸಾಧ್ಯವಾದಷ್ಟು ಪೂರ್ಣ ಗ್ರಹಿಕೆ ಸಾಧ್ಯವಾಗುವದಕ್ಕಾಗಿ, ಕಲಿಯುವವರಿಗೆ ವಿಷಯವು ಸ್ಪಷ್ಟವಾಗುವಂತೆ ಹೇಗೆ ಮಾಡಬೇಕೆಂಬುದನ್ನು ತಿಳಿಯುವದಕ್ಕಾಗಿ, ಮತ್ತು ಕ್ರಿಸ್ತನ ಉತ್ತಮ ಪ್ರತಿನಿಧಿಯಾಗಿರುವದಕ್ಕಾಗಿ ಪ್ರಾರ್ಥಿಸಿರಿ.

2. ಪಾಠಗಳನ್ನು ಕುರಿತ ಎಲ್ಲಾ ನಿರ್ದೇಶನಗಳನ್ನು ಓದಿರಿ, ಮತ್ತು ಆಮೇಲೆ ಪಾಠವನ್ನು ಓದಿರಿ, ಎಲ್ಲಾ ಪರಿಶುದ್ಧ ಬರಹಗಳನ್ನು ನೋಡಲು ಸಮಯ ತೆಗೆದುಕೊಳ್ಳಿರಿ. ಕೆಲವು ವಾಕ್ಯಭಾಗಗಳು ಮುಂದಿಡುವ ಕೆಲವು ಸಮಸ್ಯೆಗಳನ್ನು ಪರಿಹರಿಸಲು ಶಿಕ್ಷಕನು ಸಿದ್ಧನಾಗಿರಬೇಕು. ಪಾಠದ ಸಾಗುವಿಕೆಗೂ ಪಾಠದ ಉದ್ದೇಶಕ್ಕೂ ಅವನು ವಿಶೇಷ ಗಮನ ಕೊಡಬೇಕು.

3. ಪಾಠದಿಂದ ಇಡೀಯಾಗಿ ಏನನ್ನು ಸಾಧಿಸಬೇಕು ಎಂಬುದನ್ನು ನಿರ್ಧರಿಸಿರಿ, ಆ ಮೇಲೆ ಪಾಠದಲ್ಲಿಯ ಪ್ರತಿಯೊಂದು ಭಾಗದ ಹಾಗೂ ಪ್ರತಿಯೊಂದು ಹೇಳಿಕೆಯ ಉದ್ದೇಶವನ್ನು ನಿರ್ಧರಿಸಿರಿ. ಪಾಠಕ್ಕಾಗಿ ಉದ್ದೇಶವನ್ನೂ ಅನಂತರ ಪ್ರತಿಯೊಂದು ಭಾಗಕ್ಕಾಗಿ ಉದ್ದೇಶವನ್ನೂ ಬರೆದಿಡಿರಿ.

4. ಬೋಧಿಸಬೇಕಾದ ವ್ಯಕ್ತಿಯ ಮೇಲೆ ದೃಷ್ಟಿಯಿಟ್ಟು ಪಾಠವನ್ನು ಯೋಚಿಸಿರಿ. ಅವನ ಅಗತ್ಯತೆಗಳನ್ನು, ಅವನ ಮನೋಭಾವನೆಗಳನ್ನು, ಅವನ ಹಿನ್ನಲೆಯನ್ನು, ಬೈಬಲಿನ ಅವನ ತಿಳುವಳಿಕೆಯನ್ನು, ಹಾಗೂ ಅವನು ಯೇಸುವಿನ ಪ್ರತಿಷ್ಠಿತ ಹಿಂಬಾಲಕನಾಗುವಂತೆ ಅವನಿಗೆ ಸಹಾಯಮಾಡಲು ಮಾರ್ಗಗಳನ್ನು ಯೋಚಿಸಿರಿ.

5. ಒಂದು ಅಂಶವನ್ನು ಸ್ಪಷ್ಟಪಡಿಸಲು ಇಲ್ಲವೇ ಕಲಿಯುವವನ ಮನಸ್ಸಿನಲ್ಲಿ ಸತ್ಯವನ್ನು ಬಿಂಬಿಸುವದಕ್ಕಾಗಿ ಸಹಾಯಮಾಡುವ ಉದಾಹರಣೆಗಳನ್ನು ಯೋಚಿಸಿರಿ.

6. ಪರಿಶುದ್ಧ ಬರಹವು ಓದಲ್ಪಡುವಾಗ ಯಾವುದನ್ನು ನೋಡಬೇಕೆಂಬುದನ್ನು ತಿಳಿಯಲಿಕ್ಕಾಗುವಂತೆ ಕಲಿಯುವವನನ್ನು ಸಿದ್ಧಪಡಿಸುವ ಪ್ರಶ್ನೆಗಳನ್ನು ಯೋಚಿಸಿರಿ. ಒಳ್ಳೇ ಪ್ರಶ್ನೆಗಳು ಕಲಿಯುವವನು ಪಾಠಕ್ಕೆ ಸಂಬಂಧಿಸಿದ ಮಾಹಿತಿಯ ಮೇಲೆ ಕೇಂದ್ರೀಕರಿಸಲು ಸಹಾಯಮಾಡುವವು ಮತ್ತು ಬರಿದಾದ್ದರಲ್ಲಿ ಏನು ಹೋಗುತ್ತದೆ ಎಂಬುದನ್ನು ನೋಡಲು ಅವನಿಗೆ ಸಹಾಯಮಾಡುವವು.

7. ಪಾಠವನ್ನು ಪರಿಚಯಿಸಲು, ಪಾಠವನ್ನು ಪ್ರಸ್ತುತಪಡಿಸಲು, ಮತ್ತು ಪಾಠವನ್ನು

ಸಂಕ್ಷೇಪಿಸಿ ಮುಕ್ತಾಯಗೊಳಿಸಲು ಸಿದ್ಧರಾಗಿರ್ರಿ. ಪೀಠಿಕೆಯು ವಿದ್ಯಾರ್ಥಿಯನ್ನು ಪಾಠಕ್ಕಾಗಿ ಸಿದ್ಧಗೊಳಿಸಬೇಕು, ಪಾಠದಲ್ಲಿಯ ವಿಷಯವು ಅಧ್ಯಯನ ಪ್ರಶ್ನಾವಳಿಯ ಪ್ರತಿಯೊಂದು ಭಾಗದಲ್ಲಿಯ ಸಂಗತಿಯನ್ನು ಚರ್ಚಿಸುವುದಾಗಿರಬೇಕು, ಮತ್ತು ಸಾರಾಂಶ ಹಾಗೂ ಮುಕ್ತಾಯವು ಪ್ರಸ್ತುತಪಡಿಸಿದ ಪಾಠವನ್ನು ಸಂಕ್ಷೇಪವಾಗಿ ಪುನರಾವರ್ತಿಸಲ್ಪಡತಕ್ಕದ್ದು.

ಈ ರೀತಿಯಲ್ಲಿ ಶಿಕ್ಷಕನು ತನ್ನನ್ನು ಸಿದ್ಧಪಡಿಸಿಕೊಂಡ ಮೇಲೆ, ಅವನು ನಿಜ ವಾದ ಬೋಧಿಸುವ ಅನುಭವದಿಂದ ಪಾಠದೊಂದಿಗೆ ಪರಿಚಿತನಾಗುವದಕ್ಕಾಗಿ ಪಾಠವನ್ನು ತನ್ನ ಒಬ್ಬ ಸ್ನೇಹಿತನಿಗೆ ಪ್ರಸ್ತುತಪಡಿಸಬೇಕು. ಪರಿಚಯವಿಲ್ಲದ ಹಿನ್ನಲೆಯ ಒತ್ತಡದಿಂದ ಸ್ವತಂತ್ರವಾದ ಸ್ನೇಹಪರ ವಾತಾವರಣದಲ್ಲಿ ಪ್ರಸ್ತುತಪಡಿಸುವ ತನ್ನ ಕಲೆಯನ್ನು ಬೆಳಿಸಿಕೊಳ್ಳಲು ಇದು ಶಿಕ್ಷಕನಿಗೆ ಸಹಾಯಮಾಡುವುದು. ಪಾಠವನ್ನು ಪ್ರಸ್ತುತ ಪಡಿಸುವಾಗ, ಅವನು ಅನಂತರದಲ್ಲಿ ಪಾಠವು ಯಾರಿಗಾಗಿ ಉದ್ದೇಶಿಸಲ್ಪಟ್ಟಿದೆ ಎಂಬುದನ್ನು ಮನಸ್ಸಿನಲ್ಲಿಟ್ಟು ಕೊಳ್ಳಬೇಕು.

ರೂಢಿಮಾಡಿಕೊಳ್ಳುವದಕ್ಕಾಗಲೀ, ಇಲ್ಲವೇ ಕಲಿಯುವವನ ನಿರ್ದೇಶನಕ್ಕಾಗಲೀ ಪಾಠವನ್ನು ಪ್ರಸ್ತಾಪಿಸಿದನಂತರ ಪ್ರತಿಯೊಂದು ಸಲ, ಶಿಕ್ಷಕನು ಪಾಠವನ್ನು ಪ್ರಸ್ತುತಪಡಿಸಿದ್ದರ ಬಗ್ಗೆ ಮೌಲ್ಯಮಾಪನ ಮಾಡಿಕೊಳ್ಳಬೇಕು. ಮೌಲ್ಯಮಾಪನಕ್ಕೆ ಈ ಕೆಳಗಿನದನ್ನು ಉಪಯೋಗಿಸಬಹುದು:

1. ನಾನು ಪಾಠವನ್ನು ಸಾಕಷ್ಟಾಗಿ ಪರಿಚಯಿಸಿದೆನೋ?

2. ಪಾಠದ ಪ್ರತಿಯೊಂದು ಭಾಗವನ್ನು ಯೋಗ್ಯವಾಗಿ ಪ್ರಸ್ತಾಪಿಸಿದೆನೋ ಹಾಗೂ ಪ್ರತಿಯೊಂದು ಭಾಗದ ಉದ್ದೇಶವನ್ನು ಪೂರೈಸಿದೆನೋ?

3. ಪೀಠಿಕೆಯಿಂದ ಪಾಠದ ವಿಷಯಕ್ಕೆ, ಭಾಗದಿಂದ ಭಾಗಕ್ಕೆ, ಮತ್ತು ಪಾಠದ ವಿಷಯದಿಂದ ಪಾಠದ ಮುಕ್ತಾಯಕ್ಕೆ ಸರಳವಾಗಿ ಮುಂದರಿಸಿದೆನೋ?

4. ನನ್ನ ಪ್ರಶ್ನೆಗಳು ಸುಲಭವಾಗಿ ಅರ್ಥಮಾಡಿಕೊಳ್ಳಲ್ಪಟ್ಟವೋ, ಮತ್ತು ನಾವು ಓದಿದ ಪರಿಶುದ್ಧ ಬರಹಗಳಿಂದ ಅಪೇಕ್ಷಿತ ಮಾಹಿತಿಗಾಗಿ ಅವು ಕಲಿಯುವವನನ್ನು ಸಿದ್ಧಪಡಿಸಿದೆವೋ?

5. ಉದಾಹರಣೆಗಳನ್ನು ಯೋಗ್ಯವಾಗಿ ಉಪಯೋಗಿಸಿದೆನೋ?

6. ಪ್ರತಿಯೊಂದು ಭಾಗಕ್ಕೆ ಮತ್ತು ಪಾಠಕ್ಕೆ ನನ್ನ ಉದ್ದೇಶಗಳನ್ನು ಪೂರೈಸಿದೆನೋ?

7. ಪಾಠದಲ್ಲಿ ಅವನು ಕಲಿಯಬೇಕೆಂದು ನಾನು ಬಯಸಿದ್ದನ್ನು ವಿದ್ಯಾರ್ಥಿಯು ಅರ್ಥಮಾಡಿಕೊಂಡನೋ?

8. ನಾನು ಸಾಕಷ್ಟು ಸಾರಾಂಶ ಹೇಳಿ ಪಾಠವನ್ನು ಮುಕ್ತಾಯಗೊಳಿಸಿದೆನೋ?

ಮೇಲೆ ಹೇಳಿದವುಗಳಲ್ಲಿ ಕೆಲವನ್ನು ಸರಿಯಾಗಿ ಮಾಡಿಲ್ಲವೆಂದು ಶಿಕ್ಷಕನು ಕಂಡುಕೊಂಡರೆ, ಮುಂದಿನ ಪ್ರಸ್ತುತ ಪಡಿಸುವಿಕೆಯಲ್ಲಿ ಹೆಚ್ಚು ಚೆನ್ನಾಗಿ ಮಾಡಲು ಪ್ರಯತ್ನಿಸಲು ಸಮಯ ಕಳೆಯ ಬೇಕು. ಮೊದಲನೆಯ ಪ್ರಸ್ತುತ ಪಡಿಸುವಿಕೆಯು ಸರಳವಾಗಿ ಹೋಗಲಿಕ್ಕಿಲ್ಲ, ಆದರೆ ರೂಢಿಮಾಡಿಕೊಳ್ಳುವದರೊಂದಿಗೆ ಸುಲಭವಾಗಿ ಅರ್ಥಮಾಡಿಕೊಂಡ ಪಾಠವು ಪ್ರತಿಯೊಂದು ಪ್ರಸ್ತುತ ಪಡಿಸುವಿಕೆಯೊಂದಿಗೆ ಸುಧಾರಣೆಯನ್ನು ಹುಡುಕುವಲ್ಲಿ ತಾಳ್ಮೆಯಿಂದ ಶ್ರಮೆಪಡುವದರ ಪರಿಣಾಮವಾಗಿರುತ್ತದೆ.



© 2009 Truth for Today